ಇ) ಹೌದು. 2004–05ನೇ ಸಾಲಿನಲ್ಲಿ ರೂ. 20.00 ಕೋಟಿ ಅನುದಾನ ಒದಗಿಸಲಾಗಿದೆ. ಮುಖ್ಯ ನ್ಯಾಯಾಧೀಶರಿಂದ ಸ್ಥಳ ನಿಗಧಿ ಬಗ್ಗೆ ವರದಿ ಬಂದ ನಂತರ ಸದರಿ ಪೀಠ ಸ್ಥಾಪನೆಗೆ ಶೀಘ್ರ ಕ್ರಮ ಕೈಗೊಳ್ಳಲಾಗುವುದು.

ಈ) ಉತ್ತರ ಕರ್ನಾಟಕದಲ್ಲಿ ಪೀಠ ಸ್ಥಾಪಿಸಲು ಸರ್ಕಾರ ಬದ್ದವಾಗಿದೆ.

...

375 (277) : ಶ್ರೀ ಪಾಟೀಲ್ ಎಂ.ವೈ. (ಅಫ್ಜಲ್‌ಪುರ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಫಜಲಪುರ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ, ಆರೋಗ್ಯ ಘಟಕ ಹಾಗೂ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಗಳ ಸಂಖ್ಯೆ ಎಷ್ಟು;

ಆ) ಈ ಎಲ್ಲಾ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳು ಕೆಲಸ ಮಾಡುತ್ತಿದ್ದಾರೆಯೇ;

ಇ) ಈ ಜಿಲ್ಲೆಯಲ್ಲಿ ಅದರಲ್ಲೂ ಮುಖ್ಯವಾಗಿ ಆನೆಕಾಲು ರೋಗ ವ್ಯಾಪಕವಾಗಿ ಕಂಡು ಬಂದಿರುವ ಹಿನ್ನೆಲೆಯಲ್ಲಿ ಏನಾದರೂ ಮುಂಜಾಗ್ರತೆ ಕ್ರಮ ತೆಗೆದುಕೊಳ್ಳಲಾಗಿದೆಯೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಅಫಜಲಪುರ ತಾಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ : 12

ಆರೋಗ್ಯ ಘಟಕಗಳ ಸಂಖ್ಯೆ : 2

ಆಯುರ್ವೇದ ಆಸ್ಪತ್ರೆ : 6

ಯುನಾನಿ : 1

ಆ) ಪ್ರಾ.ಆ.ಕೇಂದ್ರ ಕರ್ಜಗಿ ಮತ್ತು ಪ್ರಾ.ಆ. ಉಡಚಣ ಹೊರತುಪಡಿಸಿ ಎಲ್ಲಾ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಇ) ಯಾದಗಿರಿ ವಿಭಾಗವು ಸೇರಿದಂತೆ ಗುಲ್ಬರ್ಗಾ ಜಿಲ್ಲೆಯಲ್ಲಿ ಒಟ್ಟು 11 ಆನೆಕಾಲು ರೋಗ ಚಿಕಿತ್ಸಾಲಯಗಳು ಮತ್ತು 3 ಆನೆಕಾಲು ರೋಗ ನಿಯಂತ್ರಣ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು ಇವುಗಳ ಮೂಲಕ ನಿರಂತರವಾಗಿ ರಾತ್ರಿ ರಕ್ತಲೇಪನ ಸಂಗ್ರಹಣೆ ಪರೀಕ್ಷೆ ಮತ್ತು ಮೈಕ್ರೋಫೈಲೇರಿಯಾ ಸೂಕ್ಷ್ಮಾಣು ಪತ್ತೆಯಾದ ರೋಗಿಗಳಿಗೆ ಡಿ.ಇ.ಸಿ. ಗುಳಿಗೆಗಳಿಂದ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ನಿಯಂತ್ರಣ ಘಟಕಗಳ ಮೂಲಕ ಸೊಳ್ಳೆ ನಿಯಂತ್ರಣ ಕ್ರಮಗಳನ್ನು ಸಹ ಕೈಗೊಳ್ಳಲಾಗುತ್ತಿದೆ. ಜಿಲ್ಲೆಯಲ್ಲಿನ ಎಲ್ಲಾ 10 ತಾಲ್ಲೂಕುಗಳು ಸೇರಿದಂತೆ 1695 ಗ್ರಾಮಗಳಲ್ಲಿ ಮತ್ತು 17 ಪಟ್ಟಣಗಳಲ್ಲಿ 2004ನೇ ಸಾಲಿನಿಂದ ಮುಂದಿನ 5 ವರ್ಷಗಳವರೆಗೆ ಆನೆಕಾಲು ರೋಗ ನಿವಾರಣೆಗಾಗಿ ಸಾಮೂಹಿಕ ಔಷಧಿ ನೀಡಿಕೆ ಕಾರ್ಯಕ್ರಮವನ್ನು ಮತ್ತು ವೃಷಣ ನೀರ್ಬಾವು ಶಸ್ತ್ರ ಚಿಕಿತ್ಸಾ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ.

...

377 (62) : ಶ್ರೀ ಪ್ರಭಾಕರ ಬಂಗೇರ (ಬೆಳ್ತಂಗಡಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸಮಾಜ ಕಲ್ಯಾಣ ಇಲಾಖಾವತಿಯಿಂದ ನಡೆಸುತ್ತಿರುವ ವಸತಿ ಶಾಲೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)